ಉತ್ಪಾದನೆಯಲ್ಲಿ ತೊಡಗಿಸಲಾಗಿದೆ. 1991-92ರ ಸಾಲಿನಿಂದ 1994-95ರ ವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ರೂ. 27.165 ಲಕ್ಷಗಳನ್ನು ತರಬೇತಿಗಾಗಿ ವೆಚ್ಚ ಮಾಡಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1994-95ರ ಸಾಲಿನಲ್ಲಿ ತರಬೇತಿ, ಉತ್ಪಾದನೆ, ಸರ್ಕಾರೇತರ ಸಂಘ ಸಂಸ್ಥೆಗಳಿಗೆ ಸಹ ನೆರವು ನೀಡಲಾಗಿದ್ದು ವಿವರಗಳು ಕೆಳಕಂಡಂತಿದೆ.

1)	ವಿಶ್ವಕರ್ಮ ಗುರುಕುಲ ಕುಂಬಾಶಿ ಕುಂದಾಪುರ ತಾಲ್ಲೂಕು	ರೂ. 1.50 ಲಕ್ಷ	ಭೂಮಿ, ಕಟ್ಟಡ ಹಾಗೂ ಯಂತ್ರೋಪಕರಣಗಳಿಗಾಗಿ
2)	ಪಾಟರಿ ಸೊಸೈಟಿ ಕೈರತಡಕ	ರೂ. 5.60 ಲಕ್ಷ	ಮಾಸದ ಕಾರ್ಯಾಗಾರಗಳಿಗೆ
3)	ಆಚಾರ್ಯ ಡೈಮಂಡ್ಸ್, ಕುಕ್ಕುಂದೂರು, ಉಡುಪಿ.	ರೂ. 8.56 ಲಕ್ಷ	ಯಂತ್ರೋಪಕರಣಗಳಿಗೆ

1995-96ರ ಸಾಲಿನಲ್ಲಿ ತರಬೇತಿಗಾಗಿ 725 ಫಲಾನುಭವಿಗಳನ್ನು ಮತ್ತು ಉತ್ಪಾದನೆಯಲ್ಲಿ 1485 ಫಲಾನುಭವಿಗಳನ್ನು ಆಳವಡಿಸಿಕೊಳ್ಳಲಾಗುತ್ತದೆ. ಈ ತರಬೇತಿಗಾಗಿ ಜನವರಿ 96ರ ಅಂತ್ಯದವರೆಗೆ ರೂ. 19.65 ಲಕ್ಷ ಬಿಡುಗಡೆ ಮಾಡಲಾಗಿದೆ. ಇದಲ್ಲದೆ, ಮಣಿಪಾಲದಲ್ಲಿ ಹಸ್ತಶಿಲ್ಪ ಟ್ರಸ್ಟ್ ಮೂಲಕ ಸ್ಥಾಪಿಸಲಿರುವ ಉತ್ಪಾದನಾ ಮತ್ತು ತರಬೇತಿ ಕೇಂದ್ರಕ್ಕಾಗಿ ರೂ. 14.08 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಇದುವರೆವಿಗೂ 1995-96ರ ಸಾಲಿನಲ್ಲಿ ಒಟ್ಟು ರೂ. 33.74 ಲಕ್ಷಗಳನ್ನು ವಿಶ್ವ ಯೋಜನೆಯ ಅನುಷ್ಠಾನಕ್ಕಾಗಿ ಬಿಡುಗಡೆ ಮಾಡಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ವಾಮಂಜೂರಿನಲ್ಲಿ ಅಂಗವಿಕಲರ ಕಲ್ಯಾಣಾಭಿವೃದ್ಧಿಗಾಗಿ ಒಂದು ನೋಟ್ ಪುಸ್ತಕ ತಯಾರಿಕಾ ಘಟಕ ಸ್ಥಾಪಿಸಲು ಉದ್ದೇಶಿಸಿದ್ದು, ಇದಕ್ಕಾಗಿ ರೂ. 4.281 ಲಕ್ಷಗಳನ್ನು ಬಿಡುಗಡೆ ಮಾಡುವ ಬಗ್ಗೆ ಪ್ರಸ್ತಾವನೆಯನ್ನು ಅನುಮೋದಿಸಲಾಗುತ್ತದೆ. ಹಾಗೂ 130 ಫಲಾನುಭವಿಗಳಿಗೆ ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ 'ವಿಶ್ವ' ಯೋಜನೆಯಡಿ ತರಬೇತಿ ನೀಡಲು ಅನುಮೋದಿಸಿದ್ದು, ಈ ಕಾರ್ಯಕ್ರಮಕ್ಕಾಗಿ ರೂ. 2.145 ಲಕ್ಷ ಬಿಡುಗಡೆ ಮಾಡಲಾಗುತ್ತದೆ. ಯೋಜನೆಯನ್ನು ಕಾರ್ಯಗತಗೊಳಿಸಲಾಗುತ್ತಿದೆ.

ಈ) 1994-95ರ ವರೆಗೆ ಒಟ್ಟು ರೂ. 42.825 ಲಕ್ಷಗಳನ್ನು ತರಬೇತಿ ಹಾಗೂ ಇತರ ಸಂಘ ಸಂಸ್ಥೆಗಳ ಮುಖಾಂತರ ವಿಶ್ವ ಯೋಜನೆಯನ್ನು ಅನುಷ್ಠಾನಗೊಳಿಸಲು ಬಿಡುಗಡೆ ಮಾಡಲಾಗಿದೆ. 1995-96ನೇ ಸಾಲಿನಲ್ಲಿ ಜನವರಿ 96ರ ಅಂತ್ಯದವರೆಗೆ ತರಬೇತಿಗಾಗಿ 19.66 ಲಕ್ಷ ರೂ.ಗಳನ್ನು ಹಾಗೂ ಸಂಘ ಸಂಸ್ಥೆಗಳಿಗೆ 14.08 ಲಕ್ಷ ರೂ.ಗಳನ್ನು ಒಟ್ಟು 33.74 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಸರ ವಿಶ್ಲೇಷಣಾ ಯೋಜನೆ

115 - ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ) : ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರವು ಪರಿಸರ ಇಲಾಖೆ ಹಾಗೂ ಡೆನಿಡಾ ಸಹಯೋಗದಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಸರ ವಿಶ್ಲೇಷಣಾ ಯೋಜನೆಯನ್ನು 1993ರಿಂದ ಕೈಗೊಂಡಿದೆಯೇ?

ಅ) ಈ ಅಧ್ಯಯನ ಸಮಿತಿಯ ತಜ್ಞರ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆಯೇ?

ಇ) ಈ ಅಧ್ಯಯನ ಸಮಿತಿಯ ವರದಿಯ ಆಧಾರದಲ್ಲಿ ಸರ್ಕಾರ ಯಾವ ಯಾವ ಯೋಜನೆಗಳನ್ನು ಹಮ್ಮಿಕೊಂಡಿದೆ?

ಶ್ರೀ ಪಿ.ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು) :

ಅ) ಹೌದು

ಆ) ಹೌದು

ಇ) ವರದಿಯ ಶಿಫಾರಸ್ಸುಗಳು ಸರ್ಕಾರದ ಪರಿಶೀಲನೆಯಲ್ಲಿದೆ.

ಮೈಸೂರು ನಗರದಲ್ಲಿರುವ ಕುಡಿಯುವ ನೀರಿನ ಸಮಸ್ಯೆ

184 - ಶ್ರೀ ಇ. ಮಾರುತಿ ರಾವ್ ಪವಾರ್ (ನರಸಿಂಹರಾಜ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದ ನರಸಿಂಹರಾಜ ಕ್ಷೇತ್ರದಲ್ಲಿರುವ ಸಿದ್ಧಾರ್ಥನಗರ, ಉದಯಗಿರಿ, ನಜರ್‌ಬಾದ್ ಬಡಾವಣೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣಿಸಿದ್ದು ಇದರ ಪರಿಹಾರಕ್ಕೆ ನಗರದ ಕೆ.ಆರ್. ವೃತ್ತದಿಂದ ಸಯ್ಯಾಜಿರಾವ್ ರಸ್ತೆಯ ಮೂಲಕ ನೀರಿನ ಪೈಪುಗಳನ್ನು ಆಳವಡಿಸಲು 1991ರಲ್ಲಿ ಕೆಲಸ ಪ್ರಾರಂಭಿಸಲು ಗುತ್ತಿಗೆ ನೀಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ತಕ್ಷಣ ಪ್ರಾರಂಭಿಸಲು ತಾವು ತೆಗೆದುಕೊಂಡಿರುವ ಕ್ರಮವೇನು? ಈ ವಿಷಯ ಯಾವ ಹಂತದಲ್ಲಿದೆ?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಹೌದು, ನಿಜ

ಆ) ಸದರಿ ಕೆಲಸದಲ್ಲಿ ಒಟ್ಟು 800 ಮಿ.ಮೀ. ವ್ಯಾಸದ 4810 ಮೀ. ಪಿ.ಎಸ್.ಸಿ. ಕೊಳವೆ ಆಳವಡಿಸಬೇಕಿದ್ದು ಇದುವರೆಗೆ ಒಟ್ಟು 4520 ಮಿ. ಕೊಳವೆಗಳನ್ನು ಟೌನ್‌ಹಾಲಿನಿಂದ ಜರ್ಮನ್ ಪ್ರೆಸ್‌ವರೆಗೆ ಹಾಕಲಾಗಿದೆ, ಉಳಿದ 290 ಮಿ. ಉದ್ದದ ಕೊಳವೆಗಳನ್ನು ಹೆಚ್ಚು ವಾಹನ ಸಂಚಾರವಿರುವ ಕೆ.ಆರ್. ವೃತ್ತದ ಬಳಿ ಹಾಕಬೇಕಾಗಿದ್ದ ಪಿ.ಎಸ್.ಸಿ. ಬದಲು ಉಕ್ಕಿನ ಕೊಳವೆ ಆಳವಡಿಸಲು ತೆಗೆದುಕೊಳ್ಳಲಾಗುತ್ತಿದೆ.

ಉಡುಪಿ ತಾಲ್ಲೂಕು ನೆಂಜಾರು ಗ್ರಾಮದಲ್ಲಿ ಅಕ್ರಮ ಗಣಿಗಾರಿಕೆ

172 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕು ನೆಂಜಾರು ಗ್ರಾಮದಲ್ಲಿ ಅಕ್ರಮವಾಗಿ ಗ್ರಾನೈಟ್‌ನ್ನು ಲೂಟಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಅಕ್ರಮಕ್ಕೆ ಕಾರಣರಾದವರ ಮೇಲೆ ನಿರ್ದಿಷ್ಟ ಧೋರಣೆ ತಳೆದ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸರ್ಕಾರದವರು ಶಿಸ್ತಿನ ಕ್ರಮ ಕೈಗೊಳ್ಳುವರೇ?

ಶ್ರೀ ಎಸ್.ಡಿ. ಜಯರಾಂ (ಗಣಿ ಮತ್ತು ಭೂವಿಜ್ಞಾನ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.